

ಶಸ್ತ್ರಚಿಕಿತ್ಸೆ ಒಂದೇ ದಾರಿ' ಎಂದು ಹೇಳುತ್ತಾರೆ ಡಾ.ಜೋಯಿಸ್.

'ಜತೆಗೆ ಸಂಧಿವಾತ ಸಂಬಂಧಿ ರೋಗಗಳು ಕೇವಲ ಕೀಲುಗಳಿಗೆ ಸೀಮಿತವಲ್ಲ. ಈ ರೋಗಗಳು ದೇಹದ ವಿವಿಧ ಭಾಗಗಳನ್ನು ಬಾಧಿಸುತ್ತವೆ. ಇದರಲ್ಲಿ ಮುಖ್ಯವಾಗಿ ಮೂತ್ರಪಿಂಡ, ಹೃದಯ ಮತ್ತು ನರಗಳ ಮೇಲೆ ಪರಿಣಾಮ ಬೀರುವ ಪ್ರಮೇಯವೂ ಇರುತ್ತದೆ. ಇಂತ ಸಂದರ್ಭದಲ್ಲಿ ರಕ್ತಪರೀಕ್ಷೆಗೆ ಸೂಚಿಸಲಾಗುತ್ತದೆ. ಅಲ್ಲದೆ ಎಂಆರ್‌ಐ ಸ್ಕ್ಯಾನ್, ಎಕ್ಸರೇ ಮುಂತಾದ ಪತ್ತೆ ಹಚ್ಚುವ ವಿಧಾನಗಳಿಂದ ರೋಗಿಯ ನೋವಿನ ತೀವ್ರತೆಯನ್ನೂ ತಿಳಿಯಬಹುದು. ಇದಕ್ಕೆ ತಕ್ಕಂತೆ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ' ಎನ್ನುತ್ತಾರೆ ಅವರು.

'ವಿವಿಧ ಕಾರಣಗಳಿಂದ ಸಂಧಿವಾತ ರೋಗಕ್ಕೆ ತುತ್ತಾಗುತ್ತಿರುವ ಒಟ್ಟು ಜನರಲ್ಲಿ ಶೇ.80 ರಷ್ಟು ಮಹಿಳೆಯರಿದ್ದಾರೆ. ಅಲ್ಲದೆ ಈ ರೋಗ ಮಕ್ಕಳನ್ನೂ ಬಿಡುವುದಿಲ್ಲ. ಇದಕ್ಕೆ ದೀರ್ಘಾವಧಿ ಚಿಕಿತ್ಸೆಯ ಅಗತ್ಯವಿರುತ್ತದೆ. ನಗರ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ಹೆಚ್ಚು ಹೆಚ್ಚು ಸಂಧಿವಾತ ಪ್ರಕರಣಗಳು ಪತ್ತೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ರೋಗ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ದೇಹಕ್ಕೆ ಆಗಬಹುದಾದ ಹಾನಿಯನ್ನು ತಪ್ಪಿಸಿಕೊಳ್ಳಬೇಕಾಗಿದೆ' ಎಂದು ಕಿವಿಮಾತು ಹೇಳುತ್ತಾರೆ ಈ ವೈದ್ಯರು.

ದುಡಿಯುವ ವಯಸ್ಸಿನಲ್ಲಿ ನೋವು ಕಂಡುಬಂದರೆ ಕುಟುಂಬ ನಿರ್ವಹಣೆ ಕಷ್ಟವಾಗುತ್ತದೆ. ನೋವು ಜೀವನದುದ್ದಕ್ಕೂ ಇದ್ದರೆ ಮಾನಸಿಕ ಸ್ಥೈರ್ಯವೂ ಕುಗ್ಗುತ್ತದೆ. ಸಾಮಾಜಿಕವಾಗಿಯೂ ಇತರ ವ್ಯಕ್ತಿಗಳೊಂದಿಗೆ ಸಂಪರ್ಕ, ಸಂವಹನ ನಡೆಸಲು ಕಷ್ಟವಾಗುತ್ತದೆ. ಆರ್ಥಿಕವಾಗಿ ಔಷಧಗಳ ವೆಚ್ಚ ವಿಪರೀತವಾಗಿ ಜೀವನ ದುರ್ಭರವಾಗುತ್ತದೆ. ಮೇಲಾಗಿ ಇಂತಹ ಕಾಯಿಲೆಗಳಿಗೆ ನೀಡುವ ಔಷಧಿಗಳ ಬೆಲೆಯೂ ದುಬಾರಿ. ಶಸ್ತ್ರಚಿಕಿತ್ಸೆ ಸೇರಿದಂತೆ ಒಳರೋಗಿಯಾಗಿ ಚಿಕಿತ್ಸೆ ಪಡೆದರೆ ಇದಕ್ಕೆ ಆರೋಗ್ಯ ವಿಮೆಯೂ ಇರುವುದಿಲ್ಲ. ಈ ಎಲ್ಲ ಸಮಸ್ಯೆಗಳನ್ನು ರೋಗಿ ಎದುರಿಸಬೇಕಾಗುತ್ತದೆ.

## ಸಂಧಿವಾತ ತಜ್ಞರ ಕೊರತೆ

ನಮ್ಮ ರಾಜ್ಯದಲ್ಲಿ ಸಂಧಿವಾತ ತಜ್ಞರ ಕೊರತೆ ಇದೆ. ಇದರ ಪರಿಣಾಮ ಸಂಧಿವಾತ, ಸೋರಿಯಾಟ್ರಿಕ್ ಸಂಧಿವಾತ, ಸ್ಪಾಂಡಿಲೈಟಿಸ್, ಚರ್ಮದ ರೋಗ ಸೇರಿದಂತೆ ಸಂಧಿವಾತಕ್ಕೆ ಸಂಬಂಧಿಸಿದ ಇತರೆ ರೋಗಗಳಿಂದ ಬಳಲುತ್ತಿರುವವರಿಗೆ ಸೂಕ್ತ ತಪಾಸಣೆ ಮತ್ತು ಚಿಕಿತ್ಸೆ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕಾಗಿ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯಲ್ಲಿ ಸಂಧಿವಾತ ಮತ್ತು ಕ್ಲಿನಿಕಲ್ ಇಮ್ಯುನಾಲಾಜಿ ಸಂಸ್ಥೆಯನ್ನು ಆರಂಭಿಸಲಾಗಿದೆ.

ಕರ್ನಾಟಕದಲ್ಲಿ ಕೇವಲ 32 ಸಂಧಿವಾತ ತಜ್ಞರಿದ್ದಾರೆ. ಇವರಲ್ಲಿ ಬೆಂಗಳೂರಿನಲ್ಲಿ 25 ಮಂದಿ ಇದ್ದರೆ, ಉಳಿದೆಡೆ ಕೇವಲ 7 ಮಂದಿ ಇದ್ದಾರೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಸಹ ಸಂಧಿವಾತ ಸೇರಿದಂತೆ ಇದಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಆದರೆ, ಇಡೀ ರಾಜ್ಯದಲ್ಲಿ ಕೇವಲ 5 ಮಂದಿ ಮಕ್ಕಳ ಸಂಧಿವಾತ ತಜ್ಞರಿದ್ದಾರೆ. ಇದರ ಪರಿಣಾಮ ಸಂಧಿವಾತ ತಜ್ಞರ ಮೇಲೆ ರೋಗಿಗಳ ಒತ್ತಡ ಹೆಚ್ಚಾಗುತ್ತಿದೆ. ರೋಗಿಗಳು ವೈದ್ಯರ ಭೇಟಿಗಾಗಿ ಹಲವು ದಿನಗಳ ಮೊದಲೇ ಸಮಯಾವಕಾಶವನ್ನು ಪಡೆಯಬೇಕಾಗಿದೆ. ಸೂಕ್ತ ತರಬೇತಿ ಹೊಂದಿದ ವೈದ್ಯರು ಮತ್ತು ತಪಾಸಣೆ ಸೌಲಭ್ಯಗಳು ಇಲ್ಲದ ಕಾರಣದಿಂದ ಬಹುತೇಕ ಸಂಧಿವಾತ ರೋಗಗಳಿಗೆ ಚಿಕಿತ್ಸೆ ದೊರೆಯುವುದು ತೀರಾ ವಿಳಂಬವಾಗುತ್ತಿದೆ.

ಮಕ್ಕಳೂ ಇಂದಿನ ದಿನಗಳಲ್ಲಿ ಸಂಧಿವಾತದಿಂದ ಬಳಲುವ ಸ್ಥಿತಿಯಲ್ಲಿದ್ದಾರೆ. ಮಕ್ಕಳ ತಜ್ಞರು ಕೂಡ ಸಂಧಿವಾತಕ್ಕೆ ಸಂಬಂಧಿಸಿದ ತರಬೇತಿ ಪಡೆಯಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಧಿವಾತಕ್ಕೆಂದೇ ಪ್ರತ್ಯೇಕ ವಿಭಾಗ ತೆರೆಯಬೇಕಾದ ಅನಿವಾರ್ಯತೆ ಇದೆ.

**ಸಂಧಿವಾತ ತಜ್ಞ ಡಾ. ರಮೇಶ್ ಜೋಯಿಸ್ ಸಂಪರ್ಕ: 99459 54441**

ಕುಟುಂಬ ನಿರ್ವಹಣೆಗಾಗಿ ಮಹಿಳೆ ದುಡಿಯಲೇ ಬೇಕಾದ ಪರಿಸ್ಥಿತಿ ಈಗ ಇದೆ. ಹೀಗೆ ದುಡಿಯುವ ವಯಸ್ಸಿನಲ್ಲಿ ಮಂಡಿನೋವು ಸೇರಿದಂತೆ ಇತರ ಕಾಯಿಲೆಗಳು ದೇಹವನ್ನಾಕ್ರಮಿಸಿದರೆ ಆಕೆಯ ದುಡಿತ ಮತ್ತು ಮಾನಸಿಕ ಸ್ಥೈರ್ಯ ಎರಡಕ್ಕೂ ಧಕ್ಕೆಯಾಗುತ್ತದೆ. ವ್ಯಾಯಾಮ, ನಡಿಗೆ, ಯೋಗದಂತಹ ನೈಸರ್ಗಿಕ ವಿಧಾನಗಳಿಂದ ನೋವು ಕಡಿಮೆ ಮಾಡಿಕೊಂಡರೂ ದೈಹಿಕ ಶ್ರಮ ಬಯಸುವ ಕೆಲಸಗಳಿಗೆ ನೋವುಗಳಿಂದ ಅಡ್ಡಿಯಾಗುವುದಂತೂ ನಿಶ್ಚಿತ.